**ಅಸಲು ದಾವ ಸಂಖ್ಯೆಃ947/2013**

**ಡಿ ಡಬ್ಲ್ಯೂ -1**

**ಗೌರವಾನ್ವಿತ 3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ.**

**ದಿಃ 06-08-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ.ಆರ್.ಎನ್. ವಕೀಲರಿಂದ.**

ಪ್ರತಿವಾದಿ ನಂಬರ್ 8 ಕಲ್ಲಪ್ಪ ಸುತಾರ್ ರವರು ಈ ದಿನ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ಆದರೆ ಅವರು ನನ್ನ ಹಿರಿಯ ಸಹೋದರನಿರುತ್ತಾನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಅದರಲ್ಲಿ ಏನು ಬರೆದಿದ್ದಾರೆ ಎಂಬ ಬಗ್ಗೆ ತಿಳಿದುಕೊಳ್ಳಲು ಸಹ ನಾನು ಪ್ರಯತ್ನಿಸಿರುವುದಿಲ್ಲ. ನನ್ನ ಸಹೋದರ ಪ್ರತಿವಾದಿ ನಂಬರ್ 8 ಕಲ್ಲಪ್ಪ ಸುತಾರ್ ರವರು ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತಾರೆ. ಆ ಪ್ರಕರಣಗಳಲ್ಲಿ ನಾನೂ ಸಹ ಹಾಜರಾಗಿರುತ್ತೇನೆ ಎಂದರೆ ಸರಿ. ಆ ಪ್ರಕರಣಗಳ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಸರಿ. ಸದರಿ ಪ್ರಕರಣಗಳು ಆದೇಶವಾಗಿರುವ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ಪ್ರಕರಣಗಳಲ್ಲಿ ಆದ ಆದೇಶದ ವಿರುದ್ಧ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ನಾನು ಪ್ರತಿವಾದಿ ನಂಬರ್ 8 ಕಲ್ಲಪ್ಪ ಸುತಾರ್ ರವರ ಸಹಿಯನ್ನು ನೋಡಿದರೆ ಅದನ್ನು ನಾನು ಗುರುತಿಸುತ್ತೇನೆ. ನಾನು ಈಗ ನಿಶಾನೆ ಡಿ-1 ನ್ನು ನೋಡುತ್ತಿದ್ದು ಅದರಲ್ಲಿ ಪ್ರತಿವಾದಿ ನಂಬರ್ 8 ಕಲ್ಲಪ್ಪ ಸುತಾರ್ ಇವರು ಸಹ ಸಹಿ ಮಾಡಿರುತ್ತಾರೆ. ನಿಶಾನೆ ಡಿ-9 ರಲ್ಲಿ ಪ್ರತಿವಾದಿ ನಂಬರ್ 8 ಕಲ್ಲಪ್ಪ ಸುತಾರ್ ಮತ್ತು ರಾಮಚಂದ್ರ ರವರು ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಾನು ಎಲ್ಲಾ ಜಮೀನುಗಳನ್ನು ಬಿಟ್ಟುಕೊಟ್ಟು ಐನಾಪುರ ಗ್ರಾಮಕ್ಕೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಈಗ ಎಲ್ಲಾ ಜಮೀನುಗಳು 1 ನೇ ಪ್ರತಿವಾದಿಯ ಕಬ್ಜೆಯಲ್ಲಿರುತ್ತವೆ ಎಂದರೆ ಸರಿ. ನನಗೆ ಎಲ್ಲಾ ಸಂಗತಿಗಳು ಗೊತ್ತಿದ್ದರೂ ಸಹ 1 ನೇ

ಪ್ರತಿವಾದಿಯ ಕಡೆಯಿಂದ ಹಣ ಸಿಗಬಹುದೆಂದು ನಾನು ಸ್ವತಹಃ ಈ ದಾವೆಯಲ್ಲಿ ಸೇರ್ಡೆಗೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಕೈಪಿಯತ್ ನ ಪ್ಯಾರಾ ನಂ.2 ರಲ್ಲಿ ಬರೆದಿರುವ ಸಂಗತಿಗಳನ್ನು ನಾನು ಹೇಳಿ ಬರೆಸಿರುವುದಿಲ್ಲ. ನನ್ನ ಕೈಪಿಯತ್ ನಲ್ಲಿ ನನ್ನ ಪಾಲು ನನಗೆ ಸಿಗಬೇಕೆಂದು ಬರೆಯಿಸಿರುತ್ತೇನೆ. 1/4 ನೇ ಭಾಗ ಬರಬೇಕೆಂದು ಬರೆಯಿಸಿರುತ್ತೇನೆ. ಈ ದಾವೆಯನ್ನು 1 ನೇ ಪ್ರತಿವಾದಿಯ ಮಕ್ಕಳು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿಯು ನಾನು ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳಲ್ಲಿ ನನ್ನ ಹೆಸರು ಇರುವುದಿಲ್ಲ, ನಾನು ಎಲ್ಲಾ ಆಸ್ತಿಗಳನ್ನು ಬಿಟ್ಟುಕೊಟ್ಟಿರುತ್ತೇನೆ, ಆದ್ದರಿಂದ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿ ಕಡೆಯಿಂದ ಹಣ ಪಡೆದುಕೊಂಡು ಎಲ್ಲಾ ಆಸ್ತಿಗಳನ್ನು ಅವರಿಗೆ ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರದೆ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪ್ರತಿವಾದಿ ನಂಬರ್ 1 ಮತ್ತು 2 ನೆದ್ದವರ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**